
ಬೇಸಿಗೆಗೆ ಪರ್ಯಾಯ ನುಡಿಗಟ್ಟು ‘ಕುಡಿಯುವ ನೀರಿಗೆ ಹಾಹಾಕಾರ’ ಎಂಬಂತಾಗಿದೆ. ಪದೇ ಪದೇ ಬರಗಾಲಕ್ಕೆ ಸಿಲುಕುತ್ತಿರುವ ಕೊಪ್ಪಳ ಜಿಲ್ಲೆಯ ಕೆಲವು ಹಳ್ಳಿಗಳನ್ನು ಸುತ್ತಾಡಿದಾಗ ಕಂಡ ಈ ಚಿತ್ರಗಳು, ಬರಪೀಡಿತ ಗ್ರಾಮೀಣ ಕರ್ನಾಟಕದ ಜನರು ನೀರಿಗಾಗಿ ಪಡುವ ಪಡಿಪಾಟಲುಗಳ ಪ್ರಾತಿನಿಧಿಕ ಬಿಂಬಗಳು. ಸಹೃದಯರ ಕಣ್ಣುಗಳನ್ನು ಒದ್ದೆಯಾಗಿಸುವಂತಿರುವ ಈ ಚಿತ್ರಗಳು ನೀರನ್ನು ಪೋಲು ಮಾಡುವವರ ಆತ್ಮವಿಮರ್ಶೆಗೂ ಒತ್ತಾಯಿಸುವಂತಿವೆ.



**ನೀರ ದಾರಿ ದೂರ:** ಕೊಪ್ಪಳ ಜಿಲ್ಲೆಯ ಗ್ರಾಮೀಣ ಹೆಣ್ಣುಮಕ್ಕಳಿಗೆ ಬೇಸಿಗೆಯಲ್ಲಿ ಕೊಡ ನೀರಿಗಾಗಿ ಮೈಲಿಗಳನ್ನು ಸವೆಸುವುದು ಬದುಕಿನ ಭಾಗವೇ ಆಗಿಬಿಟ್ಟಿದೆ



ಪ್ರಮಾಣದ ನೀರು ಪೂರೈಸಲು ಸಹ ಆಗದ ಆಡಳಿತಶಾಹಿ ವ್ಯವಸ್ಥೆ, ಏನೇನೋ ಸಮಜಾಯಿಷಿ ಕೊಟ್ಟು ಪಾರಾಗಿಬಿಡುತ್ತದೆ. ಸದಾ ಬಾಯಾರಿರುವ ಈ ಜನರ ಗೊಡವೆಯೇ ಬೇಡ ಎಂದು ರಾಜಕಾರಣಿಗಳಂತೂ ಇತ್ತ ಸುಳಿಯುವುದಿಲ್ಲ.

ಜನರು ನೀರಿಗಾಗಿ ಪಡುವ ಕಷ್ಟ ನೋಡಬೇಕಾದರೆ ಹಳ್ಳಿಗಳತ್ತ ಹೊರಡಬೇಕು. ಕೊಡ ಹೊತ್ತು ಸಾಗುವ ದಯನೀಯ ಮುಖಗಳು ಹೆಜ್ಜೆಹೆಜ್ಜೆಗೆ ಎದುರಾಗುತ್ತವೆ. ಒಂದೆಡೆ ತೊಡೆಯವರೆಗೂ ಕೆಸರಿನಲ್ಲಿ ಕಾಲೂರಿ, ಆಸರೆಗೆ ಇನ್ನೊಬ್ಬರ ಕೈಹಿಡಿದು ನೀರು ತುಂಬುವ ದೃಶ್ಯ. ಅದಾದ ಬಳಿಕ ತಮ್ಮ ಸರದಿಗಾಗಿ ಕಾಯುತ್ತಿರುವ ಹಲವರು. ಆ ನೀರಿಗಾಗಿಯೇ ಮೈಲುದ್ದ ದೂರದಲ್ಲಿ ನಡೆದುಕೊಂಡು ಬರುವ ನೋಟದ ಜತೆಗೆ ಸಿಕ್ಕಷ್ಟು ನೀರನ್ನು ಕೊಡದಲ್ಲಿ ತುಂಬಿಕೊಂಡು ಬೈಕ್‌ನಲ್ಲೋ ಕತ್ತೆಯ ಮೇಲೆಯೋ ಹೇರಿಕೊಂಡು ಬರುವುದೂ ಕಾಣಿಸುತ್ತದೆ.

ಕೆರೆ ಅಂಗಳದ ನೋಟ ಸೆರೆಹಿಡಿದು, ಹಳ್ಳಿಯೊಳಗೆ ಬಂದರೆ ಅಲ್ಲಿ ಆಗಾಗ್ಗೆ ಬರುವ ಟ್ಯಾಂಕರ್‌ಗಾಗಿ ಕಾಯುವ ಕೊಡಗಳ ಸರದಿ ದಂಗುಬಡಿಸುತ್ತದೆ. ಎಣಿಕೆಗೆ ಸಿಗದಷ್ಟು ಪ್ಲಾಸ್ಟಿಕ್ ಕೊಡಗಳು ಸರದಿಯಲ್ಲಿ ಮಂಗನ ಬಾಲದಂತೆ ಇಡೀ ಊರನ್ನು ಸುತ್ತಿಕೊಂಡಿರುತ್ತವೆ. ನಸುಕಿನಿಂದ ಕಾಯುತ್ತ ಕುಳಿತಿದ್ದ ಜನರನ್ನು ಮಾತಾಡಿಸಿ, ‘ಟ್ಯಾಂಕರ್ ಯಾವಾಗ ಬರ್ತದೆ’ ಎಂದು ಕೇಳಿದರೆ ಸಿಕ್ಕ ಉತ್ತರ: ‘ಬರ್ತಾದ್ರೀ ಒಟ್ನಾಗೆ ಬರ್ತಾದ’.

ಇದೆಲ್ಲ ಜನರ ದಾಹದ ಮಾತಾಯಿತು. ಜಾನುವಾರುಗಳ ಕಥೆ ಏನು? ಜನರ ದುಮ್ಮಾನವನ್ನೇ ಗಮನಿಸುವವರು ಇಲ್ಲದಿರುವಾಗ, ಈ ನಾಗರಿಕ ಜಗತ್ತಿನಲ್ಲಿ ಮೂಕಪ್ರಾಣಿಗಳ ಅಳಲಿಗೆ ಯಾರು ಕಿವಿಗೊಟ್ಟಾರು?